ಮೀನುಗಾರರಿಗೆ ಡೀಸಲ್ ಸಬ್ಸಿಡಿ

೪೩೪. ಶ್ರೀ ಜಿ. ಎಸ್. ಆಚಾರ್ (ಬೈಂದರೂ).—ಮಾನ್ಯ ಮೀನುಗಾರಿಕೆ ಹಾಗೂ ಬಂದರು ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಸರಕಾರದವರ ಘೋಷಿತ ಧೋರಣೆಯಂತೆ ಮೀನುಗಾರರಿಗೆ ಡೀಸಲ್ ಬಗ್ಗೆ ಎಷ್ಟು ಹಣ ಅನುದಾನ ರೂಪದಲ್ಲಿ ಪಾವತಿ ಮಾಡಲಾಗಿದೆ?

ಆ) ಇದರಲ್ಲಿ ೧೯೮೪-೮೫ನೇ ಹಾಗೂ ೧೯೮೫-೮೬ನೇ ವರ್ಷದಲ್ಲಿ ಪಾವತಿಯಾದ ಹಣವೆಷ್ಟು?

ಇ) ಆಯಾ ವರ್ಷಗಳಲ್ಲಿ ಕೊಡಬೇಕಾದ ವಾಸ್ತವಿಕ ಮೊತ್ತವೆಷ್ಟು ಹಾಗೂ ವಿಳಂಬಕ್ಕೆ ಕಾರಣವೇನು?

ಶ್ರೀ ಸಿ. ಬೈರೇಗೌಡ (ಮೀನುಗಾರಿಕೆ ಮತ್ತು ಬಂದರು ಸಚಿವರು).—

ಅ) ಡೀಸಲ್ ಮೇಲಿನ ಸಹಾಯಧನವನ್ನು ಇನ್ನೂ ಪಾವತಿ ಮಾಡಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ೧೯೮೪-೮೫ ಮತ್ತು ೧೯೮೫-೮೬ ಅಂಕಿಗಳನ್ನು ಪ್ರತ್ಯೇಕವಾಗಿ ಒದಗಿಸಲು ಈ ಹಂತದಲ್ಲಿ ಸಾಧ್ಯವಾಗುವುದಿಲ್ಲ. ಈ ಯೋಜನೆಯು ಹೊಸದಾಗಿ ಜಾರಿಗೆ ಬಂದಿರುವುದರಿಂದಲೂ, ಇದು ಮೊದಲನೆ ವರ್ಷವಾಗಿರುವುದರಿಂದಲೂ ಇದರ ಪ್ರಯೋಜನವನ್ನು ಪಡೆಯಲು ಮೀನುಗಾರರು ಅನುಸರಿಸಬೇಕಾದ ಕ್ರಮ, ನಿಬಂಧನೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಇನ್ನೂ ಹೆಚ್ಚಿನ ಅನುಭವವನ್ನು ಪಡೆಯಬೇಕಾಗಿರುವುದರಿಂದ ಯೋಜನೆಯ ಅನುಷ್ಠಾನದಲ್ಲಿ ವಿಳಂಬವಾಗಿರುತ್ತದೆ.

The Number of Hospitials Primary Health Centres and Primary Health Units Newly

310. Sri. B. A. UMRABBA (Vitla).—Will the Minister of or Health and Family Welfare be place to State.

A) What is the number of Hospitals, primary Health Centres and Primary Health Units newly sanctioned in the State during the years 1983-84, 1984-85 & 1985-86?

B) What is the District-wise break-up?

C) Whether Medical Officers have been appointed to all the Primary Health Centres and Primary Health Units?

D) If not when all will be filled up?

Sri. H. L. THIMMEGOWDA (Minister for Health and Family Welfare).—

A) The number of hospitials, Primary Health Centres, and Primary Health Units sanctioned in the State during the years 1983-84, 1984-85 and 1985-86 are as under.

	1983-84	1984-85	1985-86	Total
A) Hospitals	11	18	Nil	29
Primary Health Centres	13	37	Nil	58
Primary Health Units	93	37	Nil	130

B) **DISTRICT-WISE BREAK-UP**

		1983-84				1984-85				1985-86			
				PHU				PHU				PHU	
		Hospital	PHC	New	By shifting	Hospital	PHC	New	By shifting	Hospital	PHC	New	By shifting
1.	Bangalore	1	–	9	3	–	2	–	2				
2.	Tumkur	1	1	9	3	3	2	–	2				
3.	Kolar	1	2	3	1	5	3	–	1				
4.	Shimoga	–	1	4	4	1	4	–	1				
5.	Chitradurga	–	–	2	3	3	2	–	2				
6.	Belgaum	–	–	1	2	–	–	–	3				
7.	Bijapura	–	1	–	1	–	2	–	–				
8.	Karwar	2	1	1	3	1	3	–	2				
9.	Dharwad	–	–	2	–	1	3	–	3				
10.	Gulbrga	1	–	4	1	–	2	–	2				
11.	Bellary	1	–	1	1	1	2	–	–				
12.	Bidar	–	1	1	–	–	–	–	–	–Nil–			
13.	Raichur	–	–	–	–	–	1	1	–				
14.	Mysore	1	2	3	5	–	3	–	5				
15.	Mandya	1	1	7	1	2	3	–	5				
16.	Hassan	1	–	5	4	1	3	–	5				
17.	Chickmagalur	–	1	8	1	–	1	–	2				
18.	Madikeri	–	1	–	–	–	–	–	–				
19.	Dakshina Kannada	1	1	–	–	–	1	–	2				
	Total	11	13	60	33	18	37	–	37				

C) No.

D) As and when the doctors returns from Post-Graduate studies and the Karnataka Public Service Commission which has been requested to select 150 male doctors sends the list of selected candidates.

ದಕ್ಷಿಣ ಕನ್ನಡ ಜಿಲ್ಲೆಯಂ ಮೀನುಗಾರರಿಗೆ ಪರ್ಸಿನ್ ದೋಣಿಗಾಗಿ ನೀಡಲಾಗುತ್ತಿದ್ದ ಅನುಧಾನವನ್ನು ನಿಲ್ಲಿಸಿರುವ ಬಗ್ಗೆ

೭೧೮ ಶ್ರೀ ಬಿ. ಎ. ಉಮರಬ್ಬ (ವಿಟ್ಲ).—ಮಾನ್ಯ ಮೀನುಗಾರಿಕೆ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರರಿಗೆ ಪರ್ಸಿನ್ ದೋಣಿಗಾಗಿ ನೀಡಲಾಗುತ್ತಿದ್ದ ಅನುಧಾನವನ್ನು ನಿಲ್ಲಿಸಲಾಗಿದೆಯೆ ?

ಆ) ಹಾಗಿದ್ದಲ್ಲಿ ಅದಕ್ಕೆ ಕಾರಣವೇನು ?

ಇ) ಈಗಾಗಲೇ ಅರ್ಜಿ ಸಲ್ಲಿಸಿ, ಎಲ್ಲಾ ವಿಧಿವಿಧಾನಗಳನ್ನು ಪೂರ್ಣಗೊಳಿಸಿರುವವರ ಅರ್ಜಿಗಳನ್ನಾದರೂ ಅಂಗೀಕಾರ ಮಾಡಲು ಕ್ರಮ ಕೈಗೊಳ್ಳುವರೇ ?

ಶ್ರೀ ಸಿ. ಬೈರೇಗೌಡ (ಮೀನುಗಾರಿಕೆ ಹಾಗೂ ಬಂದರು ಖಾತೆ ಸಚಿವರು).—

ಅ) ಹೌದು

ಆ) ದಕ್ಷಿಣ ಕನ್ನಡ ಜಿಲ್ಲೆಯಂ ಕರಾವಳಿಯಲ್ಲಿ ಪರ್ಸಿನ್ ದೋಣಿಗಳು ಹೆಚ್ಚಿ ಕೇಂದ್ರೀಕೃತವಾಗಿರುವುದರಿಂದ ಪ್ರತಿ ಪರ್ಸಿನ್ ಬೋಟಿನ ಇಳುವರಿ ಕಡಿಮೆಯಾಗಿದೆ. ಆದಂದರಿಂದ ಪರ್ಸಿನ್ ಮೇಲೆ ಕೊಡುತ್ತಿದ್ದ ಸಹಾಯ ಧನವನ್ನು ೧-೬-೮೧ ರಿಂದ ನಿಲ್ಲಿಸಲಾಗಿದೆ. ಆದರೆ ವಿಶೇಷ ಘಟಕ ಯೋಜನೆಯಲ್ಲಿ ಪರಿಶಿಷ್ಟ ಜಾತಿ ಮೀನುಗಾರರಿಗೆ ಸಹಾಯ ಧನವನ್ನು ಮುಂದುವರಿಸಲಾಗಿದೆ.

ಇ) ಎರಡು ಆರ್ಜಿಗಳು ಕಾಲ ವಿಳಂಬವಾಗಿ ಸಲ್ಲಿಸಿದ್ದರಿಂದ ತಿರಸ್ಕರಿಸಲಾಗಿದ್ದವು ಇವುಗಳನ್ನು ಮರುಪರೀಶಿಲಿಸಲಾಗುವುದು.

ಕುಂದಾಪುರ ಕ್ಷೇತ್ರದ ಕೋಡಿ ಪ್ರಾಥಮಿಕ ಆರೋಗ್ಯ ಘಟಕದ ಸಿಬ್ಬಂದಿ ವರ್ಗದ ಬಗ್ಗೆ

೭೭೮ ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಂದಾಪುರ ಕ್ಷೇತ್ರದ ಕೋಡಿ ಪ್ರಾಥಮಿಕ ಆರೋಗ್ಯ ಘಟಕ ಮಂಜೂರಾದ ಸಿಬ್ಬಂದಿ ವರ್ಗದ ಸಂಖ್ಯೆ ಬಲವೆಷ್ಟು ?

ಆ) ಕೋಡಿ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ಕೊರತೆಯಿರುವ ವಿವಿಧ ದರ್ಜೆಯ ಸಿಬ್ಬಂದಿಗಳ ಸಂಖ್ಯೆ ಎಷ್ಟು ?

ಇ) ಈ ಕೊರತೆಯನ್ನು ಎಂದಂ ನೀಗಿಸಲಾಗುವುದು ?